# ಸಂಚಾರಿ ಶಾಲೆಗಳು

**ಪರಿಕಲ್ಪನೆ :**

ಸಂಚಾರಿ ಶಾಲೆಯು ಒಂದು ನೂತನ ಮಾದರಿಯ ಯೋಜನೆಯಾಗಿದೆ. ಮಕ್ಕಳು ಶಾಲೆಗೆ ಬರುವುದಿಲ್ಲವಾದರೆ ಶಾಲೆಯೇ ಮಕ್ಕಳ ಹತ್ತಿರ ಹೋಗಬಾರದೇಕೆ? ಮಳೆ ಬೆಳೆ ಇಲ್ಲದೆ ಕುಟುಂಬ ಸಮೇತ ಜೀವನೋಪಾಯಕ್ಕೆ ನಗರ ಪ್ರದೇಶಗಳಿಗೆ ಜನರು ಕೂಲಿ ಹುಡುಕಿಕೊಂಡು ಬಂದು ಸೇರುತ್ತಾರೆ. ಇವರ ವಾಸ ಸ್ಲಂಗಳಲ್ಲಿ ಕೆಲಸಕ್ಕೆ ಹೋದ ಪೋಷಕರು ತಮ್ಮ ಮಕ್ಕಳನ್ನು ಗುಡಿಸಲು / ಗುಡಾರದಲ್ಲಿ ವಸ್ತುಗಳ ರಕ್ಷಣೆಗೆ ಬಿಡುತ್ತಾರೆ. ಅನೇಕ ಮಕ್ಕಳು ದುಶ್ಚಟಗಳನ್ನು ಕಲಿಯುತ್ತಾರೆ. ಕೆಲವರು ಚಿಂದಿ ಆಯುತ್ತಾ, ಭಿಕ್ಷೆ ಬೇಡುತ್ತಾ ಇಲ್ಲವೇ ಕಾರ್ಮಿಕರಾಗಿ ಕಾಲ ಕಳೆಯುತ್ತಾರೆ. ಇಂತಹ ಕಡೆ ಶಾಲೆ ತೆರೆಯುವುದು ತುಂಬ ಕಠಿಣ. ಜಾಗದ ಸಮಸ್ಯೆ ಬಹುಮುಖ್ಯವಾದದ್ದು. ಒಂದು ವೇಳೆ ಸ್ಥಳ ದೊರೆತರೂ ಕಲಿಕೆಗೆ ಪೂರಕವಾದ ವಾತಾವರಣ ಇರುವುದಿಲ್ಲ. ಅಲ್ಲದೆ ಕೆಲವೆಡೆ ಮಕ್ಕಳ ಸಂಖ್ಯೆ ತೀರಾ ಕಡಿಮೆ ಇರುವುದೂ ಇದೆ. ಇಂತಹ ವೇಳೆಯಲ್ಲಿ ಮಕ್ಕಳನ್ನು ಹತ್ತಿರದ ಶಾಲೆಗೆ ಸಾಗಿಸುವ ಅಥವಾ ಬಸ್‌ನಲ್ಲಿಯೇ ತರಗತಿ ಸಂವಹನ ನಡೆಸಲು ಅನುಕೂಲವಾಗುವಂತೆ ಶಾಲೆಯನ್ನು ಸಜ್ಜುಗೊಳಿಸುವುದು ಅಗತ್ಯವೆನಿಸುತ್ತದೆ. ಇದು ಸಂಚಾರಿ ಶಾಲೆಯ ಪರಿಕಲ್ಪನೆ ಗರಿಗೆದರಲು ಇದ್ದ ಹಿನ್ನೆಲೆ. ಇದನ್ನು ಆದರಿಸಿ ಬೆಂಗಳೂರು ನಗರದಲ್ಲಿ ಮೊದಲ ಬಾರಿಗೆ ರಾಜ್ಯ ಸರ್ಕಾರ ನೆರವಿನಿಂದ ಸಂಚಾರಿ ಶಾಲೆಗಳು 1999 ರಿಂದ ಚಾಲ್ತಿಗೆ ಬಂದವು. ಬೆಂಗಳೂರು ಮಹಾನಗರ ಪಾಲಿಕೆ ಸಾರಿಗೆ ಸಂಸ್ಥೆ ಸಂಚಾರಿ ಶಾಲೆಯ ಪರಿಕಲ್ಪನೆ ಸಾಕಾರಗೊಳ್ಳಲು ಕೈಜೋಡಿಸಿವೆ. ಸಾರಿಗೆ ಸಂಸ್ಥೆ ಬಸ್‌ಗಳನ್ನು ಉಚಿತವಾಗಿ ನೀಡಿದೆ ಹಾಗೂ ಚಾಲಕರನ್ನು ಎರವಲು ಸೇವೆಯ ಮೇಲೆ ಕಳುಹಿಸಿದೆ. ತರುವಾಯ ಈ ಕಾರ್ಯಕ್ರಮವನ್ನು ಸರ್ವ ಶಿಕ್ಷಣ ಅಭಿಯಾನದ ಕಕ್ಷೆಗೆ ತರಲಾಗಿದೆ. 2005-06ನೇ ಸಾಲಿನಲ್ಲಿ ಹುಬ್ಬಳ್ಳಿ ಧಾರವಾಡ, ಮೈಸೂರು ನಗರಗಳಿಗೆ ಈ ಕಾರ್ಯತಂತ್ರ ವಿಸ್ತರಿಸಲ್ಪಟ್ಟಿದೆ/ 2006-07 ನೇ ಸಾಲಿನಲ್ಲಿ ಇನ್ನೂ ಕೆಲವು ನಗರ / ಪಟ್ಟಣಗಳಿಗೆ ಈ ಸೌಲಭ್ಯ ವಿಸ್ತರಣೆಯಾಗಲಿದೆ.

### ಬೆಂಗಳೂರು ಸಂಚಾರಿ ಶಾಲೆ

ಬೆಂಗಳೂರಿನ ಸಂಚಾರಿ ಶಾಲೆಗಳು ಸಹಾಯಕ ನಿರ್ದೇಶಕರೊಬ್ಬರ ಮಾರ್ಗದರ್ಶನದಲ್ಲಿ ನಡೆಯುತ್ತಿವೆ. ಇಲ್ಲಿ 8 ಸಂಚಾರಿ ಶಾಲೆಗಳಿದ್ದು ಬಸ್‌ಗಳು ಇದ್ದು 16 ಜನ ಶಿಕ್ಷಕಿಯರು, 10 ಜನ ಆಯಾಗಳು 8 ಜನ ಚಾಲಕರು, ಓರ್ವ ಗುಮಾಸ್ತರು ಕೆಲಸ ನಿರ್ವಹಿಸುತ್ತಿದ್ದಾರೆ. 6 ತಿಂಗಳವರೆಗೆ ಮಕ್ಕಳು ಸಂಚಾರಿ ಶಾಲೆಗೆ ದಾಖಲು ಮಾಡಿ ನಂತರ ಮುಖ್ಯವಾಹಿನಿಗೆ ಅವರನ್ನು ಸೇರಿಸಲಾಗುತ್ತದೆ. ಬೆಂಗಳೂರಿನ ಸಂಚಾರಿ ಶಾಲೆಗಳಿಂದ ಒಂದು ವರ್ಷಕ್ಕೆ ಸುಮಾರು 1000ಕ್ಕಿಂತ ಅಧಿಕ ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ.

ಬೆಂಗಳೂರಿನ ಸಂಚಾರಿ ಶಾಲೆಯು ಹಳದಿ ಬಣ್ಣದ್ದಾಗಿದ್ದು ಬಸ್ಸಿನ ಒಳಗೆ ಮತ್ತು ಹೊರಗೆ ಆಕರ್ಷಕ ಬಣ್ಣಗಳಲ್ಲಿ ಕಲಿಕಾ ಅಕ್ಷರಗಳನ್ನು ಬರೆಸಲಾಗಿದ್ದು ಕಪ್ಪು ಹಲಗೆ, ಮೆತ್ತನೆಯ ಸೀಟು, ತರಗತಿ ಕೊಠಡಿಯನ್ನು ಹೋಲುವಂತೆ ಮಾರ್ಪಡಿಸಲಾಗಿದೆ. ಮಕ್ಕಳನ್ನು ಈ ಶಾಲೆಗಳು ಆಕರ್ಷಿಸಿವೆ.

ಶಾಲೆಯಿಂದ ಹೊರಗುಳಿದ ಈ ಮಕ್ಕಳು ಕೊಳಚೆ ಪ್ರದೇಶಗಳಲ್ಲಿ ಬೀದಿಗಳಲ್ಲಿ, ಮನೆಕೆಲಸಗಳಲ್ಲಿ, ಭಿಕ್ಷೆ ಬೇಡುವಲ್ಲಿ ದೊರೆಯುತ್ತಾರೆ. ಸಂಚಾರಿ ಶಾಲಾ ವಾಹನವು ಎಲ್ಲಾ ಮಕ್ಕಳನ್ನು ತಮ್ಮ ಮಡಿಲಿಗೆ ಹಾಕಿಕೊಂಡು ಹತ್ತಿರದ ಶಾಲೆಗಳಿಗೆ ಬಂದು ನಿಲ್ಲುತ್ತದೆ. ಈ ಮಕ್ಕಳನ್ನು ಕರೆದು ತರುವುದು ಸುಲಭದ ಕಾರ್ಯವಲ್ಲ ಈ ಕಾರ್ಯ ಮಾಡಲು ಎದೆಗಾರಿಕೆ, ಮಾತಿನ ಚಾಕಚಕ್ಯತೆ, ತಂತ್ರಗಾರಿಕೆ ಪ್ರಮುಖವಾಗಿರುತ್ತದೆ. ಇದರಲ್ಲಿ ಸ್ಲಂನಲ್ಲಿರುವ ಪ್ರಮುಖ ವ್ಯಕ್ತಿಗಳು, ವಾರ್ಡಿಗೆ ಸಂಬಂಧಿಸಿದ ಕೌನ್ಸಿಲರ್‌ಗಳು, ಸ್ತ್ರೀಶಕ್ತಿ ಸಂಘದ ನಾಯಕಿಯರೊಂದಿಗೆ ಸಂಚಾರಿ ಶಾಲಾ ಚಾಲಕ, ಶಿಕ್ಷಕಿಯರು ಹಾಗೂ ಆಯಾಗಳು ಜೊತೆಗೂಡಿ ಚರ್ಚಿಸಿ ವಾತಾವರಣ ನಿರ್ಮಾಣ ಮಾಡಿಕೊಳ್ಳುತ್ತಾರೆ. ಅವರ ಜೊತೆಗೂಡಿ ಪ್ರತಿ ಮಗುವಿನ ಪೋಷಕರನ್ನು ಮನವೊಲಿಸಿ ಮಕ್ಕಳನ್ನು ಸಂಚಾರಿ ಶಾಲೆಗೆ ದಾಖಲಿಸಿಕೊಳ್ಳುತ್ತಾರೆ.

6 ರಿಂದ 14 ವರ್ಷದ ಮಕ್ಕಳಿಗೆ 8 ತಿಂಗಳಿಂದ 4 ವರ್ಷದ ಪುಟ್ಟ ಮಗುವಿನ ಜವಾಬ್ದಾರಿಯನ್ನು ವಹಿಸಿ ತಾಯಿಯು ಕೂಲಿಗೆ ಹೋಗಿರುತ್ತಾಳೆ. ಇಂತಹ ಮಕ್ಕಳ ಸಂಖ್ಯೆ ಸಾಕಷ್ಟು ಇರುತ್ತದೆ. ಸಂಚಾರಿ ಶಾಲೆಯು ಪುಟ್ಟ ಮಕ್ಕಳನ್ನು ಸೇವಕಿಯ ಜವಾಬ್ದಾರಿಯಲ್ಲಿರಿಸಿ ಮಕ್ಕಳಿಗೆ ಪಾಠ ಹೇಳಿ ಕೊಡಲಾಗುತ್ತದೆ.

ಒಂದು ಸಂಚಾರಿ ಶಾಲೆಗೆ ಇಬ್ಬರು ಶಿಕ್ಷಕರು, ಇಬ್ಬರು ಆಯಾಗಳು, ಒಬ್ಬರು ಚಾಲಕ ಇರುತ್ತಾರೆ. 50 ಕ್ಕಿಂತ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆಯುತ್ತಿದ್ದಾರೆ. ಇದೇ ರೀತಿ ಪ್ರಾರಂಭದಿಂದಲೂ ನಡೆದುಕೊಂಡು ಬರುತ್ತಿದೆ. 2005-06ರ ಸಾಲಿಗೆ 8 ಸಂಚಾರಿ ಶಾಲಾ ವಾಹನಗಳನ್ನು, 7 ಸಂಚಾರಿ ಶಾಲೆಗಳು ಕಾರ್ಯನಿರತವಾಗಿವೆ. ಉಳಿದ ಒಂದು ವಾಹನವನ್ನು ಯಾವುದೇ ವಾಹನ ಕೆಟ್ಟಾಗ, ಸಮಸ್ಯೆ ಬಂದಾಗ ಸುರಕ್ಷಿತವಾಗಿ ಕರೆತರಲು ಇಡಲಾಗಿದೆ. ಈ ಎಲ್ಲಾ ಕಾರ್ಯ ತಂತ್ರವನ್ನು ನಡೆಸಲು ಒಬ್ಬ ಸಹಾಯಕ ನಿರ್ದೇಶಕರು ಇರುತ್ತಾರೆ. ಬೆಳಿಗ್ಗೆ 8.30ಕ್ಕೆ ವಾಹನವು ಕೇಂದ್ರ ಸ್ಥಳದಿಂದ ಬಿಡುತ್ತದೆ. ಮಧ್ಯಾಹ್ನ 3 ಗಂಟೆಯವರೆಗೆ ಶಾಲಾ ಚಟುವಟಿಕೆ ನಡೆಸಿ ಮಕ್ಕಳನ್ನು ಗುಡಿಸಲುಗಳಿಗೆ ಬಿಟ್ಟು, 4 ಗಂಟೆಗೆ ಕೇಂದ್ರ ಸ್ಥಳಕ್ಕೆ ಬರುತ್ತದೆ. ಸಹಾಯಕ ನಿರ್ದೇಶಕರು, ಶಿಕ್ಷಕರ ಹಾಜರಾತಿ, ಆಯಾಗಳ ಹಾಜರಾತಿ, ಚಾಲಕರ ಹಾಜರಾತಿ ವಾಹನಗಳ ದುರಸ್ಥಿ, ಕೊಳಚೆ ಪ್ರದೇಶಗಳಲ್ಲಿ ನಡೆಯುವ ಚಟುವಟಿಕೆಗಳು, ಮಕ್ಕಳ ಸರ್ವೇಕಾರ್ಯ, ಮುಖ್ಯವಾಗಿ ಶಾಲೆಯ ಮುಖ್ಯ ಶಿಕ್ಷಕರು, ವಲಯದ ಅಧಿಕಾರಿಗಳು, ಲಾಗ್ ಪುಸ್ತಕಗಳು ದಾಖಲೆಗಳು, ಸಂಚಾರಿ ಶಾಲೆಗೆ ದಾಖಲಾದ ಮಕ್ಕಳ ವಿವರ, ಮುಖ್ಯವಾಹಿನಿಗೆ ದಾಖಲಾದ ಮಕ್ಕಳ ವಿವರ, ತಿಂಗಳ ಮಾಹೇವಾರಿ, ಶಾಲೆಗಳಿಗೆ ಭೇಟಿ, ವಾರದ ಸಭೆ, ತಿಂಗಳ ಸಭೆ, ರಾಷ್ಟ್ರೀಯ ಹಬ್ಬಗಳು ಇತ್ಯಾದಿ ಅಂಶಗಳ ಉಸ್ತುವಾರಿಯನ್ನು ಮಾಡುತ್ತಿದ್ದಾರೆ.

## ಉದ್ದೇಶಗಳು

- ಮಹಾನಗರ / ನಗರ – ಪಟ್ಟಣ ಪ್ರದೇಶಗಳಲ್ಲಿ ಕಂಡುಬರುವ ಬೀದಿ ಮಕ್ಕಳು, ಭಿಕ್ಷೆ ಬೇಡುವ ಮಕ್ಕಳು, ವಲಸೆ ಬಂದ ಕುಟುಂಬಗಳಲ್ಲಿರುವ ಮಕ್ಕಳು, ಗ್ಯಾರೇಜುಗಳಲ್ಲಿ ದುಡಿಯುತ್ತಿರುವ 6 ರಿಂದ 14 ವರ್ಷದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು.
- ಮಕ್ಕಳು ಶಾಲೆಗೆ ಬಾರದಿದ್ದಲ್ಲಿ, ಶಾಲೆಯೇ ಮಕ್ಕಳ ಹತ್ತಿರ ಹೋಗಬೇಕೆಂಬ ಆಶಯವನ್ನು ಸಂಚಾರಿ ಶಾಲೆಗಳು ಹೊಂದಿವೆ.
- ಕಠಿಣ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಪೋಷಕರ / ಮಕ್ಕಳ ಪ್ರಾಥಮಿಕ ಶಿಕ್ಷಣದಲ್ಲಿ ನೆರವು ನೀಡುವುದು ಹಾಗೂ ಚಿಂದಿ ಆಯುವ, ಬಾಲಕಾರ್ಮಿಕರಾಗಿ ದುಡಿಯುವ, ಅಲೆಮಾರಿಗಳಾಗಿ ಕಾಲನೂಕುವ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವುದು.
- ಸಾರ್ವತ್ರಿಕ ಶಿಕ್ಷಣದ ಅವಕಾಶ ಕಲ್ಪಿಸುವುದು.

## ವ್ಯಾಪ್ತಿ

- ಕೊಳಚೆ ಪ್ರದೇಶಗಳಲ್ಲಿ ಶಾಲೆಯನ್ನೇ ನೋಡದ ಅಥವಾ ಶಾಲೆಯಿಂದ ಹೊರಗುಳಿದ, ದುಷ್ಚಟಗಳಿಗೆ ಒಡ್ಡಲ್ಪಟ್ಟ ಅಥವಾ ಅಂತಹ ಅವಕಾಶ ಇರುವ 6 ರಿಂದ 14 ವಯೋಮಿತಿಯ ಮಕ್ಕಳು ಸಂಚಾರಿ ಶಾಲೆಯ ಕಕ್ಷಿದಾರರು
- ಸಂಚಾರಿ ಶಾಲೆಗಳ ವ್ಯಾಪ್ತಿ ವಿಶಾಲವಾಗಿದೆ. ಬಸ್ಸಿನಲ್ಲಿ ಪ್ರಯಾಣ ಮಾಡುತ್ತಾ ಪಾಠ ಹೇಳುವುದೇ ? ಮಕ್ಕಳಿರುವ ಜಾಗಕ್ಕೆಲ್ಲಾ ಹೋಗಿ, ಮಕ್ಕಳನ್ನು ಬಸ್ಸಿನಲ್ಲಿ ಕರೆದುಕೊಂಡು ಬಂದು ಪಾಠ ಮಾಡಲಾಗುವುದೇ ? ಎಂಬ ಪ್ರಶ್ನೆಗಳು ಏಳಬಹುದು
- ಮೂಲತಃ ಸಂಚಾರಿ ಶಾಲೆಗಳು ಮಕ್ಕಳನ್ನು ವಿವಿಧೆಡೆಗಳಲ್ಲಿ ಸಂಗ್ರಹಿಸಿ ಅನುಕೂಲವಾದ ಒಂದು ಕಡೆ ವಾಹನ ನಿಲ್ಲಿಸಿ – ವಾಹನದಲ್ಲಿಯೇ ಪಾಠ ಮಾಡಬೇಕೆಂಬ ಕ್ರಮವನ್ನು ಆಲೋಚಿಸಲಾಗಿತ್ತು. ಇದರಂತೆ ಈ ಶಾಲೆಗಳು ನಡೆದವು ಕೂಡಾ. ಆದರೆ 2005–06ನೇ ಸಾಲಿನಿಂದ (ಇ.ಸಿ. ಸಭೆಯಲ್ಲಿ ಚರ್ಚಿತವಾದ ಹಿನ್ನೆಲೆಯಲ್ಲಿ) ಸಂಚಾರಿ ಶಾಲೆಯ ಕಾರ್ಯಶೈಲಿಯಲ್ಲಿ ಕೆಲವು ಮಾರ್ಪಾಟುಗಳನ್ನು ತರಲಾಗಿದೆ. ಇದರಂತೆ ಶಾಲೆಗಳ ಮಕ್ಕಳನ್ನು ಹತ್ತಿರದ ಶಾಲೆಗೆ ಸಾಗಾಣಿಕೆ ಮಾಡಲು ಮತ್ತು ಶಾಲೆಯನ್ನಾಗಿ ಬಳಸಲು ನಮ್ಯತೆಯನ್ನು ತರಲಾಗಿದೆ. ಬೆಂಗಳೂರಿನಲ್ಲಿ ಈ ಎರಡೂ ಸಾಧ್ಯತೆಗಳನ್ನು ಸಂಚಾರಿ ಶಾಲೆಗಳು ಸಾಧಿಸುತ್ತಿವೆ. ಧಾರವಾಡ ಮತ್ತು ಮೈಸೂರು ಸಂಚಾರಿ ಶಾಲೆಗಳು ಮಕ್ಕಳನ್ನು ಹತ್ತಿರದ ಶಾಲೆಗೆ ಸಾಗಿಸುವ ಕಾರ್ಯವನ್ನು ಮಾತ್ರ ಮಾಡುತ್ತಿವೆ.

  ಸಂಚಾರಿ ಶಾಲೆಯ ವಾಹನವು ಕ್ರಮಿಸಬೇಕಾದ ದೂರವನ್ನು ಆಯಾ ಕ್ಷೇತ್ರ ಅಧಿಕಾರಿಗಳು ಹಣಕಾಸಿನ ಮಿತಿಯನ್ನು ಆದರಿಸಿ ನಿರ್ಧರಿಸಬೇಕು 05–07 ಕಿ.ಮೀ ಅಂತರದಲ್ಲಿ ಇರುವ ಸ್ಲಂಗಳಿಂದ ಮಕ್ಕಳನ್ನು ಒಯ್ಯಲು ಒಂದು ವಾಹನ ಇರುವುದು ಉಚಿತ.

## ಕಾರ್ಯತಂತ್ರವನ್ನು ಎಲ್ಲಿ / ಯಾರಿಗಾಗಿ ಪ್ರಾರಂಭಿಸಬಹುದು

- ಸಂಚಾರಿ ಶಾಲೆ ಬಡತನ ರೇಖೆಯಲ್ಲಿರುವ ಮಕ್ಕಳಿಗಾಗಿ ಇದೆ.
- ಶಾಲೆಯಿಂದ ಹೊರಗುಳಿದ ಮಕ್ಕಳು, ಕೊಳಚೆ ಪ್ರದೇಶದ ಶಾಲಾ ವಯಸ್ಸಿನ ಮಕ್ಕಳು ಸಂಚಾರಿ ಶಾಲೆಗೆ ಭಾಗವಹಿಸುತ್ತಾರೆ.
- ವಾರ್ಷಿಕ ಕಾರ್ಯ ಯೋಜನೆಯಲ್ಲಿ (ಪಿಎಬಿ) ನಿಗದಿಪಡಿಸಿರುವ ಮಿತಿಗೆ ಅನುಗುಣವಾಗಿ ಹಾಗೂ ಇಲಾಖೆಗೆ ನೀಡಿರುವ ವಾಹನಗಳ ಲಭ್ಯತೆ ಅಥವಾ ಬಾಡಿಗೆಗೆ ತೆಗೆದುಕೊಳ್ಳಲು ಸಾಧ್ಯ ಇರುವ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಸಂಚಾರಿ ಶಾಲೆಗಳ ಯೋಜನೆಯೊಂದನ್ನು ತಯಾರಿಸಿಕೊಳ್ಳಬೇಕು. ಈ ಯೋಜನೆಯು – ಮಕ್ಕಳನ್ನು ಸಂಗ್ರಹಿಸುವ ಸ್ಥಳ, ಪಾಠ ಮಾಡುವ ಸ್ಥಳ, ಭಾಗವಹಿಸುವ ಮಕ್ಕಳ ವಿವರ, ರೂಟ್ ಮ್ಯಾಪ್ ಇತ್ಯಾದಿ ಅಂಶಗಳನ್ನು ಹೊಂದಿರಬೇಕು.

## ಯಾರು ನಡೆಸಬೇಕು

- ಸಾರ್ವಜನಿಕ ಶಿಕ್ಷಣ ಇಲಾಖೆ ಡಿಡಿಪಿಐ/ ಡಿವೈಪಿಸಿ ಯವರ ನೇರ ಉಸ್ತುವಾರಿಯಲ್ಲಿ ಈ ಕಾರ್ಯತಂತ್ರ ಜಾರಿಯಾಗಬೇಕು.

## ಹಣಕಾಸು ಖರ್ಚು ವಿವರ 06–07 ರಿಂದ (ಘಟಕ ವೆಚ್ಚ ಪ್ರತಿ ಮಗುವಿಗೆ ರೂ. 3000/–

| ಹಣಕಾಸಿನ ವಾರ್ಷಿಕ ಹಂಚಿಕೆ ವಿವಿರ | ಪ್ರತಿ ಮಗುವಿಗೆ | 2009–10 (ಪ್ರತಿ ಮಗುವಿಗೆ) |
|---|---|---|
| ಮಕ್ಕಳಿಗೆ ಬೇಕಾಗುವ ಸಾದಿಲ್ವಾರು ವಸ್ತುಗಳಿಗೆ | 200 / 150– (ಹೆಚ್.ಪಿ.ಎಸ್./ಎಲ್.ಪಿ.ಎಸ್) | 200/150/– |
| ವೈದ್ಯಕೀಯ ವೆಚ್ಚ | 60/– | 60/– |
| ಟಿ.ಎಲ್.ಎಂ ಸಾದಿಲ್ವಾರು | 20/– | 20/– |
| ಹೊರಸಂಚಾರ (Trip-Lunch+Entry Fee 80/- Transport Charges 120/-) | 200/– | 200/– |
| ಸ್ವಯಂ ಸೇವಕರ ಗೌರವ ಧನ | 200/– | 200/– |
| ಮಗುವಿನ ಸಾಗಾಣಿಕೆಗೆ ದೊರೆಯುವ ಹಣ | 2320/– | 2320/– |
| | ಒಟ್ಟು | ರೂ. 3000/– |

## ಶಿಕ್ಷಕರ / ಸ್ವಯಂ ಸೇವಕರ ನೇಮಕ – ತರಬೇತಿ

- ಸಂಚಾರಿ ಶಾಲೆಗಳಿಗೆ ಶಿಕ್ಷಕರನ್ನು ನಿಯೋಜಿಸಬೇಕು. ಇವರಿಗೆ ಈಗಾಗಲೇ ತರಬೇತಿಗಳು ಆಗಿರುವುದರಿಂದ ಪ್ರತ್ಯೇಕ ತರಬೇತಿಗಳ ಅಗತ್ಯ ಇರುವುದಿಲ್ಲ.
- ಎಸ್.ಎಸ್.ಎಲ್.ಸಿ., ಪಾಸಾದ ಅಥವಾ ಅನುತ್ತೀರ್ಣಳಾದ / ನಾದ ಸ್ವಯಂ ಸೇವಕರೊಬ್ಬರನ್ನು ಪ್ರತಿ ಸಂಚಾರ ಶಾಲೆಯ ಘಟಕಕ್ಕೆ ಸರ್ಕಾರೇತರ ಸಂಘಟನೆಗಳ ಮೂಲಕ ಪಡೆದುಕೊಳ್ಳಬೇಕು
- ಇವರು ಸ್ಥಳೀಯ ಸ್ಲಂ ವಾಸಿಗಳೇ ಆಗಿದ್ದರೆ ಒಳ್ಳೆಯದು. ಇದರಿಂದ ಪೋಷಕರು ಆತಂಕ ಪಡುವುದನ್ನು ತಪ್ಪಿಸಬಹುದು.
- ಸ್ವಯಂ ಸೇವಕರು ಮಕ್ಕಳನ್ನು ಬಸ್ ಬರುವ ಸ್ಥಳಕ್ಕೆ ಕರೆದು ತರುವುದು. ಅವರನ್ನು ಮನೆಗೆ ತಲುಪಿಸಲುವುದು – ಹಾಗೂ ಶಾಲೆಗಳಲ್ಲಿ – ಸಂಚಾರಿ ಶಾಲೆ ಮಕ್ಕಳ ಜೊತೆ ಇರುವ ಚಿಕ್ಕ ಮಕ್ಕಳನ್ನು ಶಾಲೆಯ ಆವರಣದಲ್ಲಿ ಉಸ್ತುವಾರಿ ಮಾಡುವುದು ಮತ್ತು ಆಟ ಆಡಿಸುವ ಕೆಲಸ ಮಾಡಲು ನಿಯೋಜಿಸಬಹುದು.

## ಇಲಾಖೆಯಿಂದ ದೊರೆಯುವ ಸೌಲಭ್ಯಗಳು

- ಪಠ್ಯ ಪುಸ್ತಕ, ಸಮವಸ್ತ್ರ, ಮಧ್ಯಾಹ್ನ ಉಪಾಹಾರ ಇತ್ಯಾದಿ ಉಳಿದ ಶಾಲೆಗಳಲ್ಲಿ ನೀಡುವ ಎಲ್ಲಾ ಸೌಲಭ್ಯಗಳು.

## ಬೋಧಿಸಬೇಕಾದ ಪಠ್ಯವಸ್ತು

ಮಕ್ಕಳು ಶಾಲಾ ಪರಿಸರಕ್ಕೆ ಅಥವಾ ಸಂಚಾರಿ ಶಾಲೆಗೆ ಹೊಂದಿಕೊಳ್ಳುವುದು ಒಂದು ಪ್ರಯಾಸದ ಕಾರ್ಯ. ಈ ಮಕ್ಕಳಲ್ಲಿ ನೈರ್ಮಲ್ಯದ ಬಗ್ಗೆ ಕಾಳಜಿ ಇರುವುದಿಲ್ಲ. ಮೊದಲ 20 ದಿನಗಳು ಅವರ ಆರೋಗ್ಯ, ಶುಚಿತ್ವ ಕುರಿತಂತ ಮಾರ್ಗದರ್ಶನ ಅಥವ ನೇರವಾಗಿ ಶುಚಿಗೊಳಿಸಲಾಗುತ್ತದೆ. ಹಾಡುಗಳು, ಆಟಗಳು, ಹೊರ ಸಂಚಾರ ಇತ್ಯಾದಿಗಳ ಮೂಲಕ ಮಕ್ಕಳ ಆಸಕ್ತಿಯನ್ನು ಕುದುರಿಸಬೇಕಾಗುವುದು. ಇದಕ್ಕಾಗಿ ಪ್ರಾರಂಭಿಕ ಚಟುವಟಿಕೆಗಳನ್ನು ಹೆಚ್ಚು ಹೆಚ್ಚಾಗಿ ಹಮ್ಮಿಕೊಳ್ಳುವುದು. ತರುವಾಯ ಚಿಣ್ಣರ ಅಂಗಳ ಪುಸ್ತಕದಲ್ಲಿ ಬರುವ ಪಠ್ಯ ಯೋಜನೆಯನ್ನು ಮಕ್ಕಳಿಗೆ ಹೊಂದುವಂತೆ ತಯಾರಿಸಿಕೊಂಡು, ಕನ್ನಡ, ಗಣಿತ, ಪರಿಸರ ಅಧ್ಯಯನ, ಚಿತ್ರಕಲೆ ಹಾಗೂ ಇಂಗ್ಲೀಷ್ ಅಕ್ಷರಮಾಲೆ ಕಲಿಸುವುದು. ನಂತರ ಮಕ್ಕಳ ವಯಸ್ಸು / ಕಲಿಕೆಯ ಆಧಾರದ ಮೇಲೆ ಅವರನ್ನು ಸಂಬಂಧಿಸಿದ ತರಗತಿಗಳಿಗೆ ದಾಖಲೆ ಮಾಡುವುದು ಹಾಗೂ ತರಗತಿಯ ಪಠ್ಯವಸ್ತುವಿನಂತೆ ಬೋಧಿಸುವುದು.

## ಬೋಧನಾ ಕಲಿಕಾ ಸಾಮಗ್ರಿಗಳು

- ಮಕ್ಕಳು ಔಪಚಾರಿಕ ಶಾಲೆಗಳಿಗೆ ದಾಖಲಿಸಲ್ಪಟ್ಟರೆ ಇವರಿಗಾಗಿ ಪ್ರತ್ಯೇಕ ಬೋಧನಾ ಕಲಿಕಾ ಸಾಮಗ್ರಿಗಳನ್ನು ನೀಡುವ ಅವಶ್ಯವಿಲ್ಲ. ಶಾಲೆಯಲ್ಲಿ ಇರುವ ವಸ್ತುಗಳ ಉಪಯೋಗ ಸಾಕಾಗುತ್ತದೆ.

  ಆದರೆ ಶಾಲೆ ಸಂಚಾರಿ ಶಾಲೆಯ ವಾಹನದಲ್ಲಿಯೇ ಸಂಯೋಜಿಸಲ್ಪಟ್ಟರೆ ಕಲಿಕೆ – ಬೋಧನಾ ಸಾಮಗ್ರಿಗಳನ್ನು ಖರೀದಿಸಬೇಕು ಇದಕ್ಕಾಗಿ ರೂ. 1000/– ಗಳನ್ನು ಬಳಸಿಕೊಳ್ಳುವುದು

  ಮಕ್ಕಳಿಗೆ ಉಪಯುಕ್ತವೆನಿಸುವ – ಸುಧಾರಿತ ಕಲಿಕಾ ಸಾಮಗ್ರಿಗಳನ್ನು ತಯಾರಿಸಿಕೊಳ್ಳುವುದು ಉಚಿತ

## ನಿರ್ವಹಿಸಬೇಕಾದ ದಾಖಲೆಗಳು

ಸಂಚಾರಿ ಶಾಲೆಯನ್ನು ನಡೆಸಬೇಕಾದಾಗ ಅನೇಕ ದಾಖಲೆಗಳು ಇರಬೇಕಾಗುತ್ತದೆ.

1. ಸಂಚಾರಿ ಶಾಲಾ ಸಿಬ್ಬಂದಿ ಹಾಜರಾತಿ ಪುಸ್ತಕ
2. ಪ್ರತಿ ಸಂಚಾರಿ ಶಾಲಾ ವಾಹನಕ್ಕೆ ಮಕ್ಕಳ ದಾಖಲಾತಿ ಪುಸ್ತಕ
3. ಮಕ್ಕಳ ಹಾಜರಾತಿ ಪುಸ್ತಕ
4. ಮುಖ್ಯವಾಹಿನಿಗೆ ದಾಖಲಾದ ಪುಸ್ತಕ
5. ವಲಸೆ ಹೋದವರ ವಿವರ
6. ಪ್ರತಿ ವಾಹನಕ್ಕೂ ಲಾಗ್ ಪುಸ್ತಕ
7. ಸಂಚಾರಿ ಶಾಲೆಯ ಪೂರ್ಣ ವಿವರ ನೀಡುವ ಪುಸ್ತಕ
8. ಪಠ್ಯ ವಸ್ತುವಿನ ಹಂಚಿಕೆ ವಿವರ
9. ನಿಯೋಜನೆಗೊಂಡ ಶಿಕ್ಷಕರ ಕಡತ
10. ನಿಯೋಜನೆಗೊಂಡ ಚಾಲಕರ ಕಡತ
11. ನಿಯೋಜನೆಗೊಂಡ ಆಯಾಗಳ ಕಡತ
12. ವಾರ್ಷಿಕ ಅನುದಾನ ಕಡತ
13. ಆಯವ್ಯಯ ತಿಳಿಸುವ ಕಡತ

14. ಮಕ್ಕಳ ಮೌಲ್ಯಮಾಪನ ವಿವರ ಮತ್ತು ಪ್ರಗತಿಯ ದಾಖಲೆಗಳು

15. ವಾಹನದ ಎಫ್.ಸಿ, ಇನ್ಸುರೆನ್ಸ್, ವಾಯುಮಾಲಿನ್ಯ ತಪಾಸಣೆ, ದುರಸ್ತಿ ಕಡತ

16. ಚಾಲಕರ ವೇತನ ಕಡತ

17. ಸಿ.ಜಿ. ವಿವರ ಕಡತ

18. ಕೊಳಚೆ ಪ್ರದೇಶ ವಿವರ ನೀಡುವ ಕಡತ ಇನ್ನೂ ಮುಂತಾದ ದಾಖಲೆಗಳನ್ನು ರೂಢಿಸಬೇಕಾಗುತ್ತದೆ.

ಈ ದಾಖಲೆಗಳು ಬೆಂಗಳೂರಿನ ಸಂಚಾರಿ ಶಾಲೆಗಳಿಗೆ ಪ್ರಸ್ತುತ. ಉಳಿದ ಕಡೆ ಇಲ್ಲಿ ಉಲ್ಲೇಖಿಸಿರುವ ದಾಖಲೆಗಳಲ್ಲಿ ಅತ್ಯಗತ್ಯವಾಗಿರುವುದನ್ನು ಮಾತ್ರ ರೂಢಿಸಬೇಕು.

## ಉಸ್ತುವಾರಿ – ವರದಿ ಸಲ್ಲಿಕೆ

ಬೆಂಗಳೂರಿನ ಸಂಚಾರಿ ಶಾಲೆಗಳಿಗೆ ಉಸ್ತುವಾರಿ ಅಧಿಕಾರಿಯಾಗಿ ಓರ್ವ ಸಹಾಯಕ ನಿರ್ದೇಶಕರು ನೇಮಕಗೊಂಡಿದ್ದಾರೆ. ವಾಹನಗಳ ಹಂಚಿಕೆ, ರೂಟ್ ಮ್ಯಾಪ್ ತಯಾರಿ – ಪ್ರಯೋಗದಲ್ಲಿ ಕಂಡು ಬರುವ ವ್ಯತ್ಯಾಸಗಳನ್ನು ಸರಿಪಡಿಸುವುದು. ಶಿಕ್ಷಕಿಯರು, ಆಯಾಗಳ ಕರ್ತವ್ಯದ ಉಸ್ತುವಾರಿ, ಶಿಕ್ಷಕರು ಅಥವಾ ಆಯಾಗಳ ರಜೆ ಅವಧಿಯಲ್ಲಿ ಬದಲಿ ವ್ಯವಸ್ಥೆ, ಮಕ್ಕಳಿಗೆ ಬೇಕಾದ ಸಾಮಗ್ರಿಗಳ ಹಂಚಿಕೆ, ಊಟದ ವ್ಯವಸ್ಥೆ ಕಲ್ಪಿಸುವುದು, ವಾರದ / ಮಾಸಿಕ ಸಭೆಗಳಲ್ಲಿ ಶಿಕ್ಷಕರಿಗೆ ಮಾರ್ಗದರ್ಶನ, ವಾಹನದ ದುರಸ್ತಿ, ಸಹ ಪಠ್ಯ ಚಟುವಟಿಕೆಗಳ ಸಂಘಟನೆ ಇವರ ಜವಾಬ್ದಾರಿಯಾಗಿರುತ್ತದೆ.

ಮಕ್ಕಳ ಕಲಿಕಾ ಪ್ರಗತಿ, ದಾಖಲಾತಿ – ಹಾಜರಾತಿ ಕುರಿತಂತೆ ಉಪನಿರ್ದೇಶಕರು ಮತ್ತು ಉಪಯೋಜನಾ ಸಮನ್ವಯಾಧಿಕಾರಿಗಳಿಗೆ ಪ್ರತಿ ತಿಂಗಳು ವರದಿಯನ್ನು ನೀಡಬೇಕು. ಬಿ.ಇ.ಓ/ಬಿ.ಆರ.ಸಿ/ ಡಯಟ್ ನೋಡಲ್ ಅಧಿಕಾರಿ ಡಿ.ಐ.ಇ.ಟಿ ಪ್ರಿನ್ಸಿಪಾಲ್ ಮತ್ತು ಉಪನಿರ್ದೇಶಕರು ತಿಂಗಳಿಗೊಮ್ಮೆ ಈ ಕೇಂದ್ರಗಳನ್ನು ಸಂದರ್ಶಿಸಿ ಅಗತ್ಯ ಮಾಹಿತಿಯನ್ನು ಸಂಬಂಧಿಸಿದ ಅಧ್ಯಾಪಕರಿಗೆ ನೀಡುವುದು. ಸಿ.ಆರ್.ಪಿ/ ಇ.ಸಿ.ಓಗಳು ಪ್ರತಿ 15 ದಿನಗಳಿಗೊಮ್ಮೆ ಎಲ್ಲಾ ಕೇಂದ್ರಗಳನ್ನು ಸಂದರ್ಶಿಸುವುದು.

**ಸರ್ಕಾರೇತರ ಸಂಘಟನೆಗಳಿಗೆ ಭಾಗವಹಿಸಲು ಅವಕಾಶ ಇಲ್ಲ.**

* * * * *